# ‘ಹೊಲೊಗ್ರಾಮ್’ ಬೋಸ್

**ನೇತಾಜಿ ಸುಭಾಶ್‌ಚಂದ್ರ ಬೋಸ್ ಅವರ ಹೊಲೊಗ್ರಾಮ್ ಪ್ರತಿಮೆಯ ಸುದ್ದಿ ಜನರ ಗಮನಸೆಳೆದಿದೆ. ತಂತ್ರಜ್ಞಾನದ ಪ್ರಭಾವಳಿಯಲ್ಲಿ ನೇತಾಜಿ ಅವರನ್ನು ಮೂಡಿಸಿರುವ ಪ್ರಯತ್ನಕ್ಕೆ ದೇಶದೆಲ್ಲೆಡೆ ಮೆಚ್ಚುಗೆ ವ್ಯಕ್ತವಾಗಿದೆ. ಏನಿದು ಹೊಲೊಗ್ರಾಮ್ ತಂತ್ರಜ್ಞಾನ?**

**■ ಶಶಿಕುಮಾರ್ ಸಿ.**

ದೆಹಲಿಯ ‘ಇಂಡಿಯಾ ಗೇಟ್’ ಸ್ಮಾರಕದಲ್ಲಿ ಈಚೆಗೆ ಇದ್ದಕ್ಕಿದ್ದಂತೆ ಕಾಣಿಸಿಕೊಂಡ ನೇತಾಜಿ ಸುಭಾಶ್‌ಚಂದ್ರ ಬೋಸ್ ಎಲ್ಲರ ಹುಬ್ಬೇರುವಂತೆ ಮಾಡಿದ್ದರು. ಹಲವು ಊಹಾಪೋಹಗಳ ನಡುವೆಯೂ ನೇತಾಜಿ ಇಲ್ಲವೆಂಬ ತಾರ್ಕಿಕ ಅಂತ್ಯಕ್ಕೆ ಬಂದಿರುವ ದೇಶದ ಜನರಿಗೆ ಅಲ್ಲಿ ಕಂಡದ್ದು ತಂತ್ರಜ್ಞಾನದಿಂದ ರೂಪುಗೊಂಡ ನೇತಾಜಿ ಎಂದು ತಿಳಿಯಲು ಹೆಚ್ಚು ಕಾಲ ಬೇಕಿರಲಿಲ್ಲ. ಜನರ ಮನಸ್ಸಿನಲ್ಲಿ ಸದಾ ಜೀವಂತವಾಗಿರುವ ನೇತಾಜಿಗೆ ಜೀವಸ್ಪರ್ಶ ಕೊಟ್ಟು ಅವರನ್ನೇ ನೈಜವಾಗಿಯೇ ಕಣ್ತುಂಬಿಕೊಂಡಂತಹ ಅನುಭವ ಸಾಧ್ಯವಾಗಿಸಿರುವುದು ಹೊಲೊಗ್ರಾಮ್ ಎಂಬ ತಂತ್ರಜ್ಞಾನ.

ಹೊಲೊಗ್ರಾಮ್ ತಂತ್ರಜ್ಞಾನದ ಬಳಕೆ ಭಾರತದಲ್ಲಿ ತೀರಾ ಕಡಿಮೆ. ಚುನಾವಣೆ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಈ ತಂತ್ರಜ್ಞಾನವನ್ನು ತಮ್ಮ ಪ್ರಚಾರ ಕಾರ್ಯಕ್ಕೆ ಬಳಸಿಕೊಂಡದ್ದು ಬಿಟ್ಟರೆ ಮತ್ತೆ ಇದರ ಸುದ್ದಿಯ ಸದ್ದಿಲ್ಲದಂತಾಗಿತ್ತು. ಈಚೆಗೆ ಪ್ರಧಾನಿಯವರೇ ನೇತಾಜಿ ಅವರ ಹೊಲೊಗ್ರಾಮ್ ಪ್ರತಿಮೆ ಉದ್ಘಾಟಿಸಿದ ಬಳಿಕ ಆ ತಂತ್ರಜ್ಞಾನ ಮತ್ತೆ ಮುನ್ನೆಲೆಗೆ ಬಂದಿದೆ. ಇಂಡಿಯಾ ಗೇಟ್ ಸ್ಮಾರಕದಲ್ಲಿನ ಪ್ರತಿಮೆಯು ಸಂಪೂರ್ಣ ತಂತ್ರಜ್ಞಾನ ಆಧಾರಿತವಾಗಿ ಕೂಡಿದ್ದು, ನಂತರದ ದಿನಗಳಲ್ಲಿ ಅದೇ ಜಾಗದಲ್ಲಿ ನೈಜ ಪ್ರತಿಮೆ ನೆಲೆಗೊಳ್ಳಲಿದೆ.



## ಏನಿದು ಹೊಲೊಗ್ರಾಮ್?

ಹೊಲೊಗ್ರಾಮ್ ಭೌತಿಕ ವಸ್ತುಗಳನ್ನು ಪ್ರತಿಬಿಂಬಿಸುವ ಬೆಳಕಿನ ಕಿರಣಗಳಿಂದ ರಚಿಸಲಾದ ವರ್ಚುವಲ್ 3ಡಿ ಚಿತ್ರವೇ ಆಗಿದೆ. ವಸ್ತು ಅಥವಾ ವ್ಯಕ್ತಿಯೊಬ್ಬ ಮೂಲ ಚಿತ್ರದಲ್ಲಿ ಕಾಣುವಂತೆ, ಆತನ ಚಲನವಲನವನ್ನೇ ಅನುಕರಿಸುವಂತೆಯೇ ಅದನ್ನು ಮತ್ತೊಂದು ಕಡೆ ಪ್ರತಿಬಿಂಬಿಸಲು ಈ ತಂತ್ರಜ್ಞಾನ ನೆರವಾಗುತ್ತದೆ.

ಕಳೆದ ಲೋಕಸಭೆ ಚುನಾವಣೆ ವೇಳೆ ನರೇಂದ್ರ ಮೋದಿ ದೇಶದ ಯಾವುದೋ ಒಂದು ಸ್ಥಳದಲ್ಲಿ ನಿಂತು ಓಡಾಡಿಕೊಂಡು ಮಾಡಿದ ಭಾಷಣವು, ಅದೇ ಸಮಯದಲ್ಲಿ ದೇಶದ ನಾನಾ ಕಡೆ ಅವರೇ ನಿಂತು ಓಡಾಡಿಕೊಂಡು ಭಾಷಣ ಮಾಡಿದಂತೆ ಕಾಣಿಸಿದ್ದು ಹೊಲೊಗ್ರಾಮ್ ಪರಿಣಾಮಕ್ಕೆ ಸ್ಪಷ್ಟ ಉದಾಹರಣೆ.

ನೇತಾಜಿ ಅವರ ಹೊಲೊಗ್ರಾಮ್ ಪ್ರತಿಮೆ ಸ್ಥಾಪನೆಯ ಹಿಂದಿನ ಕಲ್ಪನೆಯು ಚಿತ್ರಗಳನ್ನು ವಾಸ್ತವಿಕವಾಗಿ ಮತ್ತು ಎಲ್ಲ ಕೋನಗಳಿಂದ ಗೋಚರಿಸುವಂತೆ ಮೂಡಿಸುವುದೇ ಆಗಿದೆ. ಒಂದು ಪ್ರತಿಮೆಯನ್ನು ಸುತ್ತಾಡಿ ನೋಡುವಾಗ ಸಿಗುವ ಅನುಭವವನ್ನೇ ಈ ತಂತ್ರಜ್ಞಾನವು ಕಟ್ಟಿಕೊಡುತ್ತದೆ.

## ಹೊಲೊಗ್ರಾಮ್ ವಿಶೇಷತೆ

‘ಪ್ರತಿಮೆ ಸುತ್ತಲೂ ಚಲಿಸಿದಾಗ ಆ 3ಡಿ ಚಿತ್ರವು ಜೀವಂತವಾಗಿರುವಂತೆ ಅಥವಾ ಮೂಲ ಪ್ರತಿಮೆಯಂತೆಯೇ ಗೋಚರಿಸುತ್ತದೆ. ಸಂಸ್ಕೃತಿ ಸಚಿವಾಲಯದ ಅಧಿಕಾರಿಗಳ ಪ್ರಕಾರ, ನೇತಾಜಿ ಹೊಲೊಗ್ರಾಮ್ ಪ್ರತಿಮೆಯು 4K ಪ್ರೊಜೆಕ್ಟರ್‌ನಿಂದ ಮೂಡಿಬಂದಿದ್ದು, ಅದು 30,000 ಲ್ಯುಮೆನ್‌ಗಳ ಶಕ್ತಿಯನ್ನು ಹೊಂದಿದೆ’.

‘ಹೊಲೊಗ್ರಾಫಿಕ್ ಪರದೆಯಲ್ಲಿ ಪ್ರತಿಮೆಯು ಮೂಡಿಬಂದಿದ್ದು, ಆ ಪರದೆಯು ಶೇಕಡ 90ರಷ್ಟು ಪಾರದರ್ಶಕವಾಗಿದೆ. ಅದನ್ನು ಪ್ರವಾಸಿಗರಿಗೆ ಕಾಣದಂತೆ ಅಳವಡಿಸಲಾಗಿದೆ. ಅಲ್ಲದೇ ಪ್ರತಿಮೆಯು 28 x 6 ವಿಸ್ತೀರ್ಣದ ಅಳತೆಯನ್ನು ಹೊಂದಿದ್ದು, ನೈಜ ಗ್ರಾನೈಟ್ ಪ್ರತಿಮೆಯು ಅಲ್ಲಿ ಸ್ಥಾಪನೆಯಾಗುವವರೆಗೆ ಇದೇ ಪ್ರತಿಮೆಯು ಪ್ರತಿದಿನ ಸಂಜೆಯಿಂದ ಬೆಳಗ್ಗೆವರೆಗೆ ಕಾಣಲಿದೆ. ಸ್ಪಷ್ಟವಾಗಿ ಕಾಣದ ಕಾರಣಕ್ಕೆ ಹಗಲಿನ ವೇಳೆ ಇದನ್ನು ಪ್ರದರ್ಶಿಸಲಾಗದು’ ಎಂದು ಈ ಗ್ರಾಫಿಕ್ ಮಾದರಿ ವಿನ್ಯಾಸಗೊಳಿಸಿದ ‘ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್’ನಲ್ಲಿ ಡೈರೆಕ್ಟರ್ ಜನರಲ್ ಆಗಿರುವ ಅದ್ವೈತ್ ಗಡನಾಯಕ್ ಅವರ ನೇತೃತ್ವದ ತಂಡವು ಮಾಹಿತಿ ಹಂಚಿಕೊಂಡಿದೆ.

ಹೊಲೊಗ್ರಾಮ್ ಪ್ರತಿಮೆ ನೈಜವಾಗಿ ಕಾಣುವಲ್ಲಿ ಹೊಲೊಗ್ರಾಫಿಕ್ ಪರದೆಯ ಗುಣಮಟ್ಟವು ಅತ್ಯಂತ ಹೆಚ್ಚಿನ ಪಾತ್ರವನ್ನು ವಹಿಸುತ್ತದೆ. ಗಾಳಿಯಲ್ಲಿ ಸ್ವಾಭಾವಿಕವಾಗಿ ತೇಲುವಂತೆ ತೋರುವ ಮತ್ತು ಪರದೆಯಿಂದ ಮೂಲ ಚಿತ್ರವು ಆಚೀಚೆ ಹೋಗದಂತೆ 3ಡಿ ಚಿತ್ರದ ಪ್ರಭಾವವು ಇದಕ್ಕಿದೆ. ಪ್ರತಿಮೆ ಮೂಡಲು ಪರದೆಯಂತೆ ಅದಕ್ಕೆ ಅತ್ಯಗತ್ಯವಾದ ಪ್ರೊಜೆಕ್ಟರ್‌ನ ಪಾತ್ರವೂ ದೊಡ್ಡದು. ಈ ಪ್ರತಿಮೆಗೆ ಬಳಸಿರುವ ಪ್ರೊಜೆಕ್ಟರ್ ಒಂದರ ಬೆಲೆಯೇ ಸುಮಾರು ₹15 ಲಕ್ಷ. ■